ಶೈಲಜಾ ಕೇಕಣಾಜ್, ದೇವನಗರಿ

*ಉತ್ತರಿಸಲು ಸಾಧ್ಯವಾಗದ ಪ್ರಶ್ನೆಗಳನ್ನು ತಿಂದೂ ತಿಂದೂ ಅಜೀರ್ಣವಾದ ನಿಮ್ಮ ಕಸದ ಬುಟ್ಟಿಗೆ ಮದ್ದೇನು?*



ಪಾಪ! ಆ ಕಸದ ಬುಟ್ಟಿ ಅಂತಹ ಒಂದೂ ಪ್ರಶ್ನೆ ಸಿಗದ ಕಾರಣ ಬಾಂಗ್ಲಾದೇಶದ ಬರಗಾಲದ ನಾಯಿಯಂತೆ ಕಂಗೆಟ್ಟು ಕುಳಿತಿದೆ!

ವರುಣ್ ರಾಜ್ ಎಂ.ಬಿ, ಮೋಕ

*ಕೆಲವು ದಿನದ ಮಟ್ಟಿಗೆ ನಿಮ್ಮಂತೆಯೇ ಹಾಸ್ಯಮಯವಾಗಿ ಉತ್ತರಿಸಲು ನಿಮ್ಮ ಸ್ಥಾನ ನನಗೆ ಕೊಟ್ಟು ನಿಮ್ಮ ತಲೆ ಬಾಡಿಗೆಗೆ ಕೊಡುವಿರಾ?*

ಕೊಡಬಹುದಿತ್ತು, ಆದರೆ ಒಂದೇ ಪ್ರಾಬ್ಲಮ್ – ನನ್ನ ತಲೆಗೆ ನನ್ನ ದೇಹ ಮಾತ್ರ ವಾಸ್ತು ಪ್ರಕಾರ ಸೆಟ್ ಆಗುವುದು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ವಿಷಯ ತಿಳಿದುಕೊಳ್ಳುವುದಕ್ಕೂ, ಅರ್ಥ ಮಾಡಿಕೊಳ್ಳುವುದಕ್ಕೂ ಏನು ವ್ಯತ್ಯಾಸ?*

ಪಕ್ಕದ ಮನೆ ಹುಡುಗಿ ಪ್ರೀತಿಸಿ ಓಡಿಹೋದರೆ ತಿಳಿದುಕೊಳ್ಳುತ್ತಾರೆ, ತಮ್ಮದೇ ಮನೆಯ ಕಥೆಯಾದರೆ ಅರ್ಥ ಮಾಡಿಕೊಳ್ಳುತ್ತಾರೆ!

ದೀಪಾ ವೆಂಕಟೇಶ್ ಮಹಾಲೆ, ಸಾಂಬ್ರಾಣಿ

*ಹರಕು ಬಾಯಿ ಹಡಗನ್ನೂ ಮುಳುಗಿಸುತ್ತದೆ ಎನ್ನುತ್ತಾರೆ. ಏಕೆ?*

ಒಳ ಒಳಗೇ ಅಲೆ ಅಲೆಗಳನ್ನು ಎಬ್ಬಿಸುವುದರಿಂದ.

ವಿ. ಹಮೀದ್, ವಿಟ್ಲ

*ನಕ್ಕರೆ ಅದೇ ಸ್ವರ್ಗ; ಅತ್ತರೆ?*




ಸೀರಿಯಲ್ ವೀಕ್ಷಕ ವರ್ಗ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ವಿಭೀಷಣ ದಿನ ಆಚರಿಸಬೇಕು ಎಂದುಕೊಂಡಿದ್ದೇನೆ. ಯಾರನ್ನು ಉದ್ಘಾಟನೆಗೆ ಕರೆಸಲಿ ರಾಂಜೀ?*

ವಿಶ್ವದ ಮೊದಲ ಪಕ್ಷಾಂತರಿಯ ದಿನ ಉದ್ಘಾಟಿಸಲು ಎರಡು ತಿಂಗಳಲ್ಲಿ ಮೂರು ಪಾರ್ಟಿ ಬದಲಾಯಿಸಿದ ಪೂಜಾಗಾಂಧಿಯೇ ಸೂಕ್ತ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ನಾಲ್ಕು ಜನರ ಮಧ್ಯೆ ಇರುವಾಗ ನನ್ನನ್ನು ಕರೆಯಬೇಡ ಎಂದು ಲಲನೆ ಹೇಳುವುದು ಏಕೆ?*

ನಿಮ್ಮ ಒಳಿತಿಗಾಗಿಯೇ. ಹಾಗೆ ಕರೆದರೆ ಆ ನಾಲ್ಕು ಜನರೂ ನಿಮ್ಮನ್ನು ಹೊತ್ತೊಯ್ಯುವ ಮಟ್ಟಕ್ಕೆ ತಲುಪಿಸಿಯಾರೆಂದು ಆಕೆಯ ಭಯ!

ವಿ.ಎಸ್.ಹಿಂದೂಪುರ, ಬಳ್ಳಾರಿ

*ಕ್ಷಮೆ, ದಯೆ ಇವುಗಳ ವ್ಯತ್ಯಾಸವೇನು?*

ನಡೆ ತಪ್ಪಿದರೆ ಕ್ಷಮೆ ಅಗತ್ಯ, ಎಡೆ ತಪ್ಪಿದರೆ ದಯೆ ಅಗತ್ಯ.

ಎನ್.ಎಸ್.ಆನಂದ್, ಕತ್ತರಗುಪ್ಪ

*ಕೈ- ಕಾಲುಗಳನ್ನು ಎರಡೆರಡು ಕೊಟ್ಟ ದೇವ ತಲೆಯನ್ನು ಮಾತ್ರ ಒಂದೇ ಕೊಟ್ಟಿದ್ದಾನಲ್ಲಾ, ಏಕೆ ಸ್ವಾಮಿ ಹೀಗೆ?*

ಹೇರ್ ಆಯಿಲ್, ಹೇರ್ ಕಟಿಂಗ್, ಹೇರ್ ಸ್ಟೈಲ್ ಖರ್ಚು ಉಳಿಸಲು.

ಕಾರ್ತಿಕ್ ಕೆ.ಎನ್. ತುಮಕೂರು

*ಈ ಆಧುನಿಕ ಜಗತ್ತಿನಲ್ಲಿ ನಿಜವಾದ ಬಡವನಾರು?*

ದುಡಿಯಲು ಅವಶ್ಯವಾದ ಆರೋಗ್ಯ ಇಲ್ಲದವನು.

ಎಂ.ಬಿ. ರಂಗಪ್ಪಶೆಟ್ಟಿ, ಮೋಕ

*ಉದರನಿಮಿತ್ತಂ ಬಹುಕೃತವೇಷಂ; ಅದಿರು ನಿಮಿತ್ತಂ?*

ಬಹುವಿಧ ಚೌರ್ಯಂ, ಸೆರೆಮನೆ ಶಯನಂ.

ಹಾಡ್ಯ ಬಿ. ಜಯಾನಂದ, ಮೈಸೂರು

*ಹಿಗ್ಗುವ, ನುಗ್ಗುವ ಯೌವನ, ಕುಗ್ಗುವ, ಬಗ್ಗುವ ಮುಪ್ಪು. ಇವೆರಡರ ಮಧ್ಯೆ?*

ಮೊದ್ದಾದ/ಮುದ್ದಾದ ಹೆಂಡತಿ, ಕಾಡುವ/ಬೇಡುವ ಮಕ್ಕಳು!

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು

*ಯಾರಿಗೂ ಗೊತ್ತಿರದ ಒಂದೇ ಒಂದು ಸಂಗತಿ ಯಾವುದು?*

ಗುಟ್ಟು!

ಕುಮಾರ ಚಲವಾದಿ, ಹೊಳೆನರಸಿಪುರ

*ಕಾರ್ಯೇಷು ದಾಸಿ, ಕರಣೇಷು ಮಂತ್ರಿ... ಈ ಗುಣಗಳಿರುವ ಹೆಣ್ಣುಗಳು ಈಗ ಎಲ್ಲಿದ್ದಾರೆ?*

ಇದ್ದಾರೆ, ಕೊಂಚ ವ್ಯತ್ಯಾಸವಷ್ಟೆ; ಕಾರ್ಯೇಷು bossy, ಕಲಹೇಷು ಮಂತ್ರಿ, ಭೋಜೇಷು ಶ್ರೋತಾ, ಕ್ಷಮಯಾ ದರಿದ್ರಾ!

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಜ್ಯೋತಿಷ್ಯಕ್ಕೂ, ಭವಿಷ್ಯಕ್ಕೂ ಏನು ವ್ಯತ್ಯಾಸ?*

ಜ್ಯೋತಿಷ್ಯವನ್ನು ಜ್ಯೋತಿಷಿ ಹೇಳುತ್ತಾನೆ, ಭವಿಷ್ಯವನ್ನು ಹೆಂಡತಿ ನಿರ್ಧರಿಸುತ್ತಾಳೆ.

ಓಂಚನ್ನೇಶ್, ಅರಬಿಳಚಿ ಕ್ಯಾಂಪ್

*ದೇವರುಗಳಿಗೇಕೆ ಎರಡಕ್ಕಿಂತ ಹೆಚ್ಚಿಗೆ ಕೈಗಳಿರುತ್ತವೆ ರಾಮ್?*

ತಲೆಗಳ ಸಂಖ್ಯೆ, ತಲೆನೋವುಗಳ ಸಂಖ್ಯೆ ಹೆಚ್ಚಿದಷ್ಟೂ ಕೈಗಳ ಸಂಖ್ಯೆ ಹೆಚ್ಚಲೇಬೇಕು!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಹೆಂಗಸನ್ನು ಗೃಹಮಂತ್ರಿ ಎಂದು ಕರೆಯಲು ಕಾರಣವೇನು?*

ಆ ಸದನದಲ್ಲಿ ಮಂತ್ರಿ ಉಂಟುಮಾಡುವಷ್ಟೇ ಕೋಲಾಹಲವನ್ನು ಈ ಸದನದಲ್ಲಿ ಈಕೆ ಉಂಟುಮಾಡುವುದರಿಂದ!

ಪಿ.ಜಿ. ರಾಘವೇಂದ್ರ, ಮೈಸೂರು

*ಗಣನಾಯಕನ ಮೂರ್ತಿಯನ್ನು ವಿಸರ್ಜಿಸುವಂತೆ ಜನನಾಯಕರನ್ನು ವಿಸರ್ಜಿಸುವಂತಿದ್ದಿದ್ದರೆ?*



ಊರಿನ ಕೆರೆಗಳೆಲ್ಲಾ ಕಳೇಬರಗಳಿಂದ ಹೌಸ್ ಫುಲ್!

ಬಿ.ಎನ್. ಸೊಲ್ಲಾಪುರ, ಬೀದರ್

*ವಿದೇಶಿ ಮಾಲು ಬಳಕೆಯಾಗುವುದು ಯಾವಾಗ ನಿಲ್ಲುತ್ತದೆ ಸರ್?*

ಕೆಟ್ಟಾಗ!

ಎಚ್.ಆರ್.ಕಡಿವಾಲ, ಬದಾಮಿ

*ಇಂದು ಖಾಸಗಿ ಕೆಲಸದಲ್ಲಿ ಸ್ತ್ರೀಯರಿಗೆ ಪ್ರಾಶಸ್ತ್ಯ ಕೊಡುತ್ತಿದ್ದಾರೆ ಏಕೆ?*

ಸಿಗರೇಟ್ ಬ್ರೇಕ್ ಇರುವುದಿಲ್ಲವಾದ್ದರಿಂದ!

■ ರಾಮ್